ಹುಲಿಯ ವರ್ತನೆಯನ್ನು ಅದರ ವಿವಿಧ ರೀತಿಯ ಗರ್ಜನೆಯ ಮೂಲಕವೇ ರೇಡಿಯೊದ ಮೂಲಕ ಕೇಳಿಸಬೇಕೆಂಬ ಅವರ ವಿಚಾರವು ಆ ಕಾರ್ಯಕ್ರಮದ ಮೂಲಕ ಕಾರ್ಯಗತವಾಗಿತ್ತಷ್ಟೇ ಅಲ್ಲ, ಮಕ್ಕಳ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನೂ ಬೀರಿತ್ತು. ಆ ರೂಪಕಕ್ಕೆ ರಾಜ್ಯ ಸರಕಾರವು ವಿಶೇಷ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತ್ತು. ಜೊತೆಗೆ, ಆ ವರ್ಷದ ಆಕಾಶವಾಣಿಯ ರಾಷ್ಟ್ರೀಯ ಸ್ಪರ್ಧೆಯ 'ವಿನೂತನ ಮಾದರಿ ಕಾರ್ಯಕ್ರಮ'ಗಳ ವರ್ಗದಲ್ಲಿ ಅದಕ್ಕೆ ಪ್ರಥಮ ಪುರಸ್ಕಾರ ಕೂಡ ಬಂದಿತ್ತು. ಈ ಕಾರಣಕ್ಕಾಗಿಯೇ ವಿವಿಧ ಶಾಲೆಗಳನ್ನೂ ಒಳಗೊಂಡಂತೆ ಹಲವಾರು ಸಂಘ–ಸಂಸ್ಥೆಗಳು ಡಾ. ಚಟರ್ಜಿ ಅವರನ್ನು ಗೌರವಿಸಿ ಸನ್ಮಾನಿಸಿದ್ದವು. ಇದೆಲ್ಲವೂ ಒಂದು ಸಲ ಡಾ. ಚಟರ್ಜಿಯವರ ಕಣ್ಮುಂದೆ ಚಿತ್ರಪಟದಂತೆ ಹರಿದು ಹೋಗುತ್ತಿದ್ದಂತೆಯೇ ಅವರ ಮುಖದ ಮೇಲೆ ಮತ್ತೊಮ್ಮೆ ಸಂತಸದ ನಗು ಚಿಮ್ಮಿತು. ತಮ್ಮಷ್ಟಕ್ಕೆ ತಾವೇ ಒಮ್ಮೆ ಗೋಣು ಅಲ್ಲಾಡಿಸಿ, 'ಛೆ' ಅನ್ನುತ್ತಲೇ ತಮ್ಮ ಅಂತರ್ಮುಖಿ ಸ್ಥಿತಿಯಿಂದ ಹೊರಬಂದುಬಿಟ್ಟರು. ಆಗಲೇ ಅವರ ನೆನಪಿನ ಸುರುಳಿಯಲ್ಲಿ ಮತ್ತೊಮ್ಮೆ ಹಾಯ್ದು ಹೋದದ್ದು, ಝೂದಲ್ಲಿಯ ಹುಲಿಯು ಗರ್ಜಿಸುವಂತೆ ಮಾಡಲು ಅದಕ್ಕೆ ಕುರಿಯ ಕಾಲಿನ ಮಾಂಸದ ತುಂಡೊಂದನ್ನು ಕೊಂಡು ತಂದ ಘಟನೆ. ಆ ರೀತಿ ಕೊಂಡು ತಂದ ಮಾಂಸದ ತುಂಡಿಗಾಗಿಯೇ ಅವರು ಎರಡೂವರೆ ಆಣೆ ಹಣವನ್ನು ಖರ್ಚು ಮಾಡಿದ್ದರು. ಹಾಗೆ ಮಾಡಿದ್ದೇ ನಿಯಮಗಳ ಪ್ರಕಾರ ತಪ್ಪು ಎಂದು ಆಡಿಟ್ ಪಾರ್ಟಿಯವರು ಶರಾ ಬರೆದದ್ದು. ಅದು ಗಂಭೀರವಾದ ಅಪರಾಧವೇನೂ ಅಲ್ಲವೆಂಬ ಕಾರಣಕ್ಕಾಗಿಯೇ ಭಗವಂತರಾವ್ ಅವರು ರಿಪೋರ್ಟಿನ ಕೊನೆಯ ಭಾಗದಲ್ಲಿ ಅದನ್ನು ಸೂಕ್ಷ್ಮವಾಗಿ ನಮೂದಿಸಿದ್ದರೇನೋ ನಿಜ, ಆದರೆ ಡಾ. ಚಟರ್ಜಿ ಅವರಿಗೆ ಅದೂ ಗಂಭೀರ ವಿಚಾರವೇ ಆಗಿತ್ತು. ಇದೆಲ್ಲ ನೆನಪಾಗುತ್ತಿದ್ದಂತೆ ಆ ಇಡೀ ಘಟನೆ ಮತ್ತೊಮ್ಮೆ ಕಣ್ಮುಂದೆ ಬಂದು, 'ಛೆ, ನಮ್ಮ ವ್ಯವಸ್ಥೆ ಹೇಗಿದೆಯಲ್ಲ!' ಎಂಬ ಸಣ್ಣ ವಿಷಾದದ ಭಾವನೆಯೊಂದು ಅವರ ಮನಸ್ಸಿನಲ್ಲಿ ಸುಳಿದು ಹೋಯಿತು. ಡ್ಯಾಮ್ ಇಟ್ ಎನ್ನುತ್ತಲೇ ಮತ್ತೆ ಅವರು ತಮ್ಮ ಕೆಲಸದಲ್ಲಿ ಮುಳುಗಿದರು.

★★★

ಮಾನ್ಯ ಮಹಾನಿರ್ದೇಶಕರ ಸನ್ನಿಧಿಗೆ, ಕಲ್ಕತ್ತಾ

ಗೌರವಾದರದ ನಮಸ್ಕಾರಗಳು.

ಗೌರವಾನ್ವಿತ ಲೆಕ್ಕಪರಿಶೋಧಕರು, ಕಳೆದ ದಿನಾಂಕ 18ರಂದು ನಮ್ಮ ಕಚೇರಿಗೆ ಸಲ್ಲಿಸಿದ ಆಡಿಟ್‌ನ ವರದಿಯಲ್ಲಿ ಎತ್ತಿರುವ ಆಕ್ಷೇಪಣಾ ಪತ್ರವು ಮಹಾನಿರ್ದೇಶನಾಲಯಕ್ಕೂ ತಲುಪಿರಲು ಸಾಕು. ಅವರು ಎತ್ತಿರುವ ಆಕ್ಷೇಪಣೆಗೆ ಈ ಕೆಳಗಿನಂತೆ ವಿವರಣೆ ನೀಡಲಾಗುತ್ತಿದೆ.

ಲೆಕ್ಕಪರಿಶೋಧಕರು ಹೇಳಿರುವಂತೆ, ಕಲ್ಕತ್ತಾ ಝೂದಲ್ಲಿನ ರಾಯಲ್ ಬೆಂಗಾಲ್ ಹುಲಿಗೆ ಮಾಂಸದ ತುಂಡನ್ನು ತಿನ್ನಿಸಲು ಎರಡೂವರೆ ಆಣೆ ಹಣವನ್ನು ಖರ್ಚು ಮಾಡಿದ್ದು ನಿಜ. ಕೇಂದ್ರವು ಮಕ್ಕಳಿಗಾಗಿ ನಿರ್ಮಿಸಿದ 'ಶಾಲೆಗೆ ಬಂತು ಹುಲಿ' ಎಂಬ ವಿನೂತನ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಜೀವಂತ ಹುಲಿಯ ಘರ್ಜನೆಯ ಯಥಾವತ್ ದನಿಯನ್ನು ಕೇಳಿಸುವ ಉದ್ದೇಶಕ್ಕಾಗಿ, ಆ ಹುಲಿಯು ಘರ್ಜಿಸುವಂತೆ ಮಾಡಲು ಮಾಂಸದ ತುಂಡಿನ ಆಸೆ ತೋರಿಸುವುದು ಅನಿವಾರ್ಯವಿತ್ತು. ಕಾರ್ಯಕ್ರಮದಲ್ಲಿ ವಾಸ್ತವತೆ ತರುವ ದೃಷ್ಟಿಯಿಂದ ಇದು ಅತ್ಯಗತ್ಯವಾಗಿದ್ದ ಕಾರಣ ಎರಡೂವರೆ ಆಣೆಯ ಮಾಂಸದ ತುಂಡೊಂದನ್ನು ಕೊಂಡು, ಆ ಖರ್ಚನ್ನು ಕಲಾವಿದರಿಗೆ ಕೊಡಮಾಡುವ ಚಹಾ–ಪಾನೀಯದ (ಎಂಟರ್‌ಟೇನ್‌ಮೆಂಟ್ ಎಕ್ಸ್‌ಪೆಂಡೀಚರ್) ತಪಶೀಲಿನ ಅಡಿಯಲ್ಲಿ ಕಚೇರಿಯಿಂದ ಭರಿಸಲಾಗಿದೆ.

ಮೇಲೆ ಸೂಚಿಸಿದ ವಾಸ್ತವಾಂಶದ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧಕರ ಆಕ್ಷೇಪಣೆಯನ್ನು ಕೈಬಿಟ್ಟು,